ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಆ) ೧೭೨.

ಆ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತು ಸಾಕಷ್ಟು ಅನುದಾನ ಒದಗಿಸಿಲ್ಲವಾದ್ದರಿಂದ, ಈ ಕಾಮಗಾರಿಗಳಿಗೆ ಮಂಜೂರಾತಿ ನೀಡಲು ಸಾಧ್ಯವಾಗಿಲ್ಲ.

ಹೋದಿರಾಯನಹಳ್ಳದಿಂದ ಜಂಬದಹಳ್ಳಕ್ಕೆ ನೀರು ತಿರುಗಿಸಲು ಯೋಜನೆ

೧೪೮೨ (೨೯೦೭) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) ತರೀಕೆರೆ ತಾಲ್ಲೂಕಿನ ಜಂಬದಹಳ್ಳ ಜಲಾಶಯಕ್ಕೆ ಹೋದಿರಾಯನಹಳ್ಳದಿಂದ ಪರಿವರ್ತನೆ ಯೋಜನೆ ಕಾರ್ಯರೂಪಕ್ಕೆ ತರಲು ಅರಣ್ಯ ಇಲಾಖೆಯಿಂದ ಸುಮಾರು ೧೨ ಎಕರೆ ಅರಣ್ಯ ಜಮೀನನ್ನು ಸ್ವಾಧೀನ ಪಡೆಯಲು ಭದ್ರಾ ಪ್ರಾಧಿಕಾರದವರು ಅರಣ್ಯ ಇಲಾಖೆಯನ್ನು ಕೇಳಿರುವುದು ನಿಜವೇ ?

ಆ) ಈ ಜಮೀನನ್ನು ಯಾವಾಗ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ನಿಜ.

ಆ) ಅರಣ್ಯ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ

೧೪೮೩ (೨೯೦೬) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೮ನೇ ಇಸವಿಯಲ್ಲಿ ಕೇಂದ್ರ ಸರ್ಕಾರವು ಎಷ್ಟು ಕಿಲೋಮೀಟರು ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡಲು ರಾಜ್ಯ ಸರ್ಕಾರಕ್ಕೆ ಅನುಮತಿ ಕೊಟ್ಟಿದೆ ?

ಆ) ಅವುಗಳು ಯಾವುವು ಹಾಗೂ ಅವುಗಳ ಪೂರ್ಣ ವಿವರ ನೀಡುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೮ನೇ ಇಸವಿಯಲ್ಲಿ ರಾಜ್ಯದಲ್ಲಿ ಯಾವ ರಸ್ತೆಗಳನ್ನೂ ಹೊಸ ರಾಷ್ಟ್ರೀಯ ಹೆದ್ದಾರಿ ಗಳೆಂದು ಕೇಂದ್ರ ಸರ್ಕಾರ ಘೋಷಿಸಿಲ್ಲ.

ಆ) (ಅ) ನಲ್ಲಿ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಏತ ನೀರಾವರಿ ಯೋಜನೆಗಳು

೧೪೮೪ (೨೯೦೨) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೬-೮೭, ೧೯೮೭-೮೮, ೧೯೮೮-೮೯ನೇ ಸಾಲಿನಲ್ಲಿ ಎಷ್ಟು ಏತ ನೀರಾವರಿ ಯೋಜನೆ ಯನ್ನು ಮಾಡಿದ್ದೀರಿ ?

ಆ) ಅವುಗಳಲ್ಲಿ ಎಷ್ಟು ಪೂರ್ಣಗೊಂಡಿವೆ ಮತ್ತು ಯಾವ ಯಾವ ಪ್ರದೇಶಗಳಲ್ಲಿ ಪೂರ್ಣ ಗೊಳಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಕ್ರಮವಾಗಿ ೫೭, ೪ ಮತ್ತು ೨ ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆ.